ಇಸಿಎ 2/2020 ಆರ್.ಡಬ್ಲ್ಯೂ 1. ಶ್ರೀ. ಮಹೇಶ್ ಪ್ರಸಾದ್.

ಸಾಕ್ಷಿಯನ್ನು ದಿನಾಂಕ 01.06.2024 ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀಸವಾಲುಃ</u> ಅರ್ಜಿದಾರರ ಪರ ಶ್ರೀ. ಎನ.ಎಂ.ಜಿ. ವಕೀಲರಿಂದಃ

ನಾನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಪೋಲಿಸ್ ದಾಖಲಾತಿಗಳನ್ನು ನೋಡಿ ಸಾಕ್ಷಿ ನುಡಿಯುತ್ತಿದ್ದೇನೆ. ಈ ಅಪಘಾತಕ್ಕೆ ಸಂಬಂಧಪಟ್ಟಂತೆ ಮಾಲೀಕರಿಗೆ ದಾಖಲೆಗಳನ್ನು ಹಾಜರುಪಡಿಸಿರುವಂತೆ ನೋಟೀಸ್ ನೀಡಿರುತ್ತೇನೆ. ಆ ಬಗ್ಗೆ ದಾಖಲೆಗಳನ್ನು ಹಾಜರು ಮಾಡಿಲ್ಲ. ಹಾಜರುಪಡಿಸುತ್ತೇನೆ. ಅಪಘಾತದ ಕಾಲಕ್ಕೆ ಅಪಘಾತದಲ್ಲಿ ಭಾಗಿಯಾದ ವಾಹನಕ್ಕೆ ವಿಮೆ ಚಾಲ್ತಿಯಲ್ಲಿತ್ತು. ಅಪಘಾತವಾದ ದಿನ 1 ನೇ ಎದುರುದಾರನಿಂದ ಸಾಗರ ಎನ್ನುವವರು ಗೂಡ್ಸ್ ಆಟೋವನ್ನು ಬಾಡಿಗೆಗೆ ಹಾನೇಗಲ್‌ಗೆ ಹೋಗಲು ತೆಗೆದುಕೊಂಡು ಹೋದಾಗ ಸುನೀಲ್ ಕುಮಾರ್ ಸದರಿ ಆಟೋವನ್ನು ಚಾಲನೆ ಮಾಡುತ್ತಿದ್ದ ಎಂದು ಪೋಲಿಸ್ ದಾಖಲೆಗಳಲ್ಲಿ ನಮೂದಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ಹಾನಗಲ್ ಹೋದ ಬಗ್ಗೆ ನನಗೆ ಮಾಹಿತಿ ಇಲ್ಲ. 1 ನೇ ಎದುರುದಾರರ ಮಾಲೀಕತ್ವಕ್ಕೆ ಒಳಪಟ್ಟ ಗೂಡ್ಸ್ ಆಟೋವನ್ನು ಸುನೀಲ್ ಕುಮಾರ್ ರವರು ಚಲಾಯಿಸುತ್ತಿದ್ದರಿಂದ ಅಪಘಾತದಲ್ಲಿ ಆತನು ಮೃತಪಟ್ಟಿದ್ದರಿಂದ ಮತ್ತು ಆ ದಿನಾಂಕಕ್ಕೆ ವಿಮೆ ಚಾಲ್ತಿಯಲ್ಲಿದ್ದುದ್ದರಿಂದ ಭಾಧ್ಯಸ್ಥರಿರುವುದಿಲ್ಲ ಎಂದರೆ ಸುಳ್ಳು. ಸಾಕ್ಷಿ ಮುಂದುವರೆದು ಗೂಡ್ಸ್ ಆಟೋ ಮಾಲೀಕರು ಮತ್ತು ಚಾಲಕ ತಾಯಿ ಮಗ ಆಗಿರುವುದರಿಂದ ಪರಿಹಾರ ಕೊಡಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನಾವು ಪರಿಹಾರ ಕೊಡುವುದರಿಂದ ತಪ್ಪಿಸಿಕೊಳ್ಳುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷಿ ನುಡಿದಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸ ಇ

ಅಪರ ಹಿರಿಯ ಸಿಜೆ ಮತ್ತು ಎಂಎಸಿಟಿ, ಶ್ರೀರಂಗಪಟ್ಟಣ